# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು-572 103 ದೂರವಾಣಿ : 0816-2254546

ಸಂಖ್ಯೆ:ತುವಿ: ಸಿಬ್ಬಂದಿ:2022-23/898 ದಿನಾಂಕ:15.06.2022

## : ಸುತ್ತೋಲೆ :

**ವಿಷಯ: ವಾರ್ಷಿಕ ಕಾರ್ಯ ನಿರ್ವಹಣಾ ವರದಿಗಳನ್ನು ಸಲ್ಲಿಸುವ ಕುರಿತು.**

ಉಲ್ಲೇಖ: 1. ಬೋಧಕ ಸಿಬ್ಬಂದಿಗಳ ಮನವಿ ದಿನಾಂಕ:30.03.2022

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:14.06.2022(ಕಂಡಿಕೆ 79 ಪು.ಸಂ.20)

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಮನವಿಯಲ್ಲಿ ಕೆ.ಸಿ.ಎಸ್. ನಿಯಮ 51(1)ರ ಪ್ರಕಾರ ವಾರ್ಷಿಕ ವೇತನ ಬಡ್ತಿಗೆ ಕಾರ್ಯ ನಿರ್ವಹಣಾ ವರದಿಯನ್ನು ಮಾತ್ರ ಪರಿಗಣಿಸಬೇಕೆಂದು ಉಲ್ಲೇಖಿಸಿರುವುದರಿಂದ ಇನ್ನು ಮುಂದೆ Self-Appraisal Performance Reportನ್ನು ವಾರ್ಷಿಕ ವೇತನ ಬಡ್ತಿಗೆ ಪರಿಗಣಿಸಬಾರದೆಂದು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಬೋಧಕ ಹಾಗೂ ತತ್ಸಮಾನ ವೃಂದದ ಇತರೆ ಶೈಕ್ಷಣಿಕ ಸಿಬ್ಬಂದಿಗಳು ಕರ್ನಾಟಕ ನಾಗರೀಕ ಸೇವಾ ನಿಯಮ 51ರನ್ವಯ ವಾರ್ಷಿಕ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಸಂಬಂಧ ಪ್ರತಿ ವರ್ಷ ಮಾರ್ಚ್ ಅಂತ್ಯಕ್ಕೆ ಅನ್ವಯವಾಗುವಂತೆ ವಾರ್ಷಿಕ ಕಾರ್ಯ ನಿರ್ವಹಣಾ ವರದಿಗಳನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಿಗದಿತ ನಮೂನೆಯಲ್ಲಿ ಕಡ್ಡಾಯವಾಗಿ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ. ತಪ್ಪಿದಲ್ಲಿ ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯಲಾಗುವುದು.

ಮುಂದುವರೆದು, ಪ್ರತಿ ಕ್ಯಾಲೆಂಡರ್ ವರ್ಷದ Performance Based Appraisal System(PBAS) ನಮೂನೆಯನ್ನು ಭರ್ತಿ ಮಾಡಿ ಸೂಕ್ತ ದಾಖಲೆಗಳೊಂದಿಗೆ, ಸಂಬಂಧಪಟ್ಟ IQAC ನಿರ್ದೇಶಕರು/ಸಂಯೋಜಕರುಗಳಿಗೆ ಕಡ್ಡಾಯವಾಗಿ ಸಲ್ಲಿಸುವುದು.

ಪ್ರಸ್ತುತ ಯಾವುದೇ ವಾರ್ಷಿಕ ವೇತನ ಬಡ್ತಿಗಳನ್ನು ಪಡೆಯದ/ Performance Based Appraisal System (PBAS)ನ್ನು ಸಲ್ಲಿಸಿರದ ಎಲ್ಲಾ ಬೋಧಕ ಹಾಗೂ ತತ್ಸಮಾನ ವೃಂದದ ಇತರೆ ಶೈಕ್ಷಣಿಕ ಸಿಬ್ಬಂದಿಗಳು ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸಲಾಗಿರುವ ವಾರ್ಷಿಕ ಕಾರ್ಯ ನಿರ್ವಹಣಾ ವರದಿ ನಮೂನೆಯಲ್ಲಿ ನಿಗದಿತ ಮಾಹಿತಿ/ವಿವರಗಳನ್ನು ಭರ್ತಿ ಮಾಡಿ ಸಮುಚ್ಚಿತ ಮಾರ್ಗದಲ್ಲಿ ಕುಲಸಚಿವರಿಗೆ ಸಲ್ಲಿಸುವುದು.

ಮೇಲ್ಕಂಡ ಅಂಶಗಳನ್ನು ಎಲ್ಲಾ ಬೋಧಕ ಹಾಗೂ ತತ್ಸಮಾನ ವೃಂದದ ಇತರೆ ಶೈಕ್ಷಣಿಕ ಸಿಬ್ಬಂದಿಗಳ ಗಮನಕ್ಕೆ ತರಲು ಈ ಮೂಲಕ ಸೂಚಿಸಲಾಗಿದೆ.

ಆದೇಶದ ಮೇರೆಗೆ

16/6/22

ಕುಲಸಚಿವರು

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು.

ಗೆ,

1. ಅಧ್ಯಕ್ಷರು/ಸಂಯೋಜಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ಹಾಗೂ ಸಂಶೋಧನಾ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಪ್ರಾಂಶುಪಾಲರು, ಘಟಕ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಉಪಗ್ರಂಥಪಾಲಕರು, ವಿಶ್ವವಿದ್ಯಾನಿಲಯ ಗ್ರಂಥಾಲಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು:

1. ನಿರ್ದೇಶಕರು, IQAC, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಕಚೇರಿ ಪ್ರತಿ.

# ತುಮಕೂರು ವಿಶ್ವವಿದ್ಯಾನಿಲಯ

## ನಮೂನೆ

(4, 5, 6 ಮತ್ತು 7ನೇ ನಿಯಮಗಳನ್ವಯ)

**ಗ್ರೂಪ್-ಎ, ಗ್ರೂಪ್-ಬಿ ಮತ್ತು ಗ್ರೂಪ್-ಸಿ ಹುದ್ದೆಗಳನ್ನು ಧಾರಣ ಮಾಡಿದ ಖಾಯಂ ನೌಕರರಿಗೆ ಅನ್ವಯವಾಗುವ ವಾರ್ಷಿಕ ಕಾರ್ಯನಿರ್ವಹಣಾ ವರದಿ**

___________ ರಿಂದ ___________ ರವರೆಗಿನ ಅವಧಿಯ ವರದಿ.

**ಭಾಗ-1: ವೈಯಕ್ತಿಕ ಮಾಹಿತಿ**

(ವರದಿ ಮಾಡುವ ನೌಕರರು ಭರ್ತಿ ಮಾಡಬೇಕಾದುದು)

| | | |
|---|---|---|
| 1. | ಸರ್ಕಾರಿ ನೌಕರನ ಹೆಸರು | |
| 2. | ಪದನಾಮ | |
| 3. | ಜನ್ಮ ದಿನಾಂಕ | |
| 4. | ವರದಿಯ ಸಾಲಿನಲ್ಲಿ ಗಳಿಸಿದ ಹೆಚ್ಚುವರಿ ವಿದ್ಯಾರ್ಹತೆ ಯಾವುದಾದರೂ ಇದ್ದಲ್ಲಿ ವಿವರ ನೀಡುವುದು | |
| 5. | ವರದಿಯ ಸಾಲಿನಲ್ಲಿ ಗಳಿಕೆ ರಜೆ ಸೌಲಭ್ಯವನ್ನು ಬಳಸಿಕೊಂಡಿದ್ದಲ್ಲಿ ವಿವರ ನೀಡುವುದು | |
| | ಇಂದ: ವರೆಗೆ: | |
| 6. | ವಾರ್ಷಿಕ ಆಸ್ತಿ ವಿವರ ಪಟ್ಟಿಯನ್ನು ಸಲ್ಲಿಸಿದ ದಿನಾಂಕ | |

ಸ್ಥಳ :
ದಿನಾಂಕ :

ಸಹಿ:
ಹೆಸರು ಮತ್ತು ಪದನಾಮ

## ಭಾಗ–2: ಸ್ವಯಂ ಮೌಲ್ಯಮಾಪನ

(ವರದಿ ಮಾಡುವ ನೌಕರರು ಭರ್ತಿ ಮಾಡಬೇಕಾದುದು)

| | |
|---|---|
| 1. ಕರ್ತವ್ಯಗಳ ಸಂಕ್ಷಿಪ್ತ ವಿವರಣೆ | |
| 2. ಈ ಕೆಳಕಂಡ ಅಂಶಗಳನ್ನೊಳಗೊಂಡಂತೆ ಸರ್ಕಾರಿ ನೌಕರನು ನಿರ್ವಹಿಸಿದ ಕೆಲಸದ ಸಂಕ್ಷಿಪ್ತ ಸ್ವಯಂ ಮೌಲ್ಯಮಾಪನ<br><br>(ಎ) ಆತನು/ ಆಕೆ ಸ್ವಯಂ ನಿಗಧಿಪಡಿಸಿಕೊಂಡಿರುವ ಯಾವುದಾದರೂ ಗುರಿಗಳು | |
| (ಬಿ) ಮಾಡಿರುವ ಯಾವುದಾದರೂ ವಿಶೇಷ ಸಾಧನೆಗಳು | |
| (ಸಿ) ನಿರ್ಬಂಧಗಳು, ಯಾವುದಾದರೂ ಇದ್ದಲ್ಲಿ | |

ಸ್ಥಳ :
ದಿನಾಂಕ :

ಸಹಿ:
ಹೆಸರು ಮತ್ತು ಪದನಾಮ

ಅಧ್ಯಕ್ಷರು/ ಸಂಯೋಜಕರು/ಪ್ರಾಂಶುಪಾಲರ ಸಹಿ